

ಆಶ್ವಿಟ್ಜ್ ಒಳಗಿನ ಕೆಂಪು ಇಟ್ಟಿಗೆಯ ಕಟ್ಟಡಗಳು

# ಮನುಷ್ಯತ್ವವನ್ನೇ ಕೊಂದ ತಾಣ ಆಶ್ವಿಟ್ಜ್

■ ಡಿ.ಜಿ. ಮಲ್ಲಿಕಾರ್ಜುನ

**ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ನಾಜಿಗಳು ನಿರ್ಮಿಸಿದ್ದ ಆಶ್ವಿಟ್ಜ್ ಬರ್ಕನೌ ಡೆತ್‌ಕ್ಯಾಂಪ್, ಕ್ರೂರತೆಯ ದರ್ಶನ ಮಾಡಿಸುತ್ತದೆ. ಈ ನೆಲದಲ್ಲಿ ಎದೆ ನಡುಗಿಸುವ ಯಾತನೆಯ ನೋವಿನ ಕಥನಗಳಿವೆ.**

ಮೇ ತಿಂಗಳ ಮಧ್ಯಾಹ್ನ, ಹುಳಿ ಬಿದ್ದು ಒಡೆದ ಹಾಲಿನಂತೆ, ಆಗಸದಲ್ಲಿ ಮೋಡ ಹರಡಿ ಮಬ್ಬು ಬೆಳಕು ಮೂಡಿತ್ತು. ಸುಯ್ಯನೆ ಬೀಸುತ್ತಿದ್ದ ಗಾಳಿ ಮೈ ತಣ್ಣಗಾಗಿಸುತ್ತಿತ್ತು. ಜಗತ್ತಿನ ಅತ್ಯಂತ ಭೀಕರ ಮಾನವ ದುರಂತದ ಸ್ಥಳ ಆಶ್ವಿಟ್ಜ್‌ನಲ್ಲಿ ಕಾಲಿಡುವ ಹೊತ್ತಿಗೆ ಮನಸ್ಸು ಕೂಡ ಒಡೆದ ಮೋಡದಂತೆ, ಹೊರಗಿನ ತಣ್ಣನೆ ವಾತಾವರಣಕ್ಕೆ ಮುದುಡಿದ ದೇಹದಂತೆ ವ್ಯಾಕುಲಗೊಂಡಿತ್ತು.

ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ನಾಜಿಗಳು, ತಾವು ಆಕ್ರಮಿಸಿದ್ದ ಪೋಲೆಂಡಿನಲ್ಲಿ ಆರು ಡೆತ್ ಕ್ಯಾಂಪ್ (ಎಕ್ಸ್‌ಅರ್ಮಿನೇಷನ್ ಕ್ಯಾಂಪ್)ಗಳನ್ನು, ಮಾನವರ ಕಗ್ಗೊಲೆಗಾಗಿಯೇ ಕಾರ್ಖಾನೆಗಳಂತೆ ನಿರ್ಮಿಸಿದ್ದರು. ಅವುಗಳಲ್ಲಿ ಅತಿ ಹೆಚ್ಚಿನ ಜನರನ್ನು ಕೊಂದದ್ದು ಒಸ್ವಿಯೆಂಚಿನ್ ನಗರದ ಬಳಿ ಇರುವ ಆಶ್ವಿಟ್ಜ್‌ಬರ್ಕನೌ ಕ್ಯಾಂಪ್. ಅದಕ್ಕೇ ಇರಬೇಕು ಈ ತಾಣವನ್ನು ಪ್ರಪಂಚದ ಅತಿ ದೊಡ್ಡ ಸ್ಮಶಾನ ಎನ್ನುವರು.

ಈ ಶಿಬಿರ ಮೂಲತಃ ಪೋಲಿಷ್ ಸೈನ್ಯದ ಬ್ಯಾರಕ್‌ಗಳು. 1940ರಲ್ಲಿ ಇವನ್ನು ಪೋಲಿಷ್ ರಾಜಕೀಯ ಕೈದಿಗಳ ಕಾರ್ಮಿಕ ಶಿಬಿರವನ್ನಾಗಿಸಲು ಆಗಮಿಸಿದ್ದ ನಾಜಿ ಅಧಿಕಾರಿಗಳು, ಈ ಕಟ್ಟಡಗಳು ಅತ್ಯಂತ ಕೊಳಕಾಗಿ ಅನೈರ್ಮಲ್ಯದಿಂದ ಕೂಡಿದ್ದು, ದುರ್ವಾಸನೆ ಬೀರುತ್ತಿವೆ ಎಂದು ಆಗಿನ ಈ ಶಿಬಿರದ ದುಸ್ಥಿತಿಯ ಬಗ್ಗೆ ಬರೆದಿದ್ದರಂತೆ!

ನಾಜಿಗಳು ಹಳೆಯ 20 ಕಟ್ಟಡ ಸಮುಚ್ಚಯಗಳಿಗೆ ಮೊದಲಿದ್ದಂತೆ ಕೆಂಪು ಇಟ್ಟಿಗೆ ಬಳಸಿ ಹೊಸ ಮಹಡಿಯನ್ನು ಕಟ್ಟಿದ್ದಲ್ಲದೆ, ಎಂಟು ಹೊಸ ಕಟ್ಟಡಗಳನ್ನು ಕಟ್ಟಿದರು. ಗಿಡ ಮರಗಳನ್ನು ನೆಟ್ಟರು. ಎರಡೆರಡು ವಿದ್ಯುತ್ ತಂತಿಗಳ ಬೇಲಿ, ಸುತ್ತ ಆರು ಅಡಿಗಳ ಆಳದ ಕಂದಕ ನಿರ್ಮಾಣ ಮಾಡಿದರು.

ತಲೆ ಎತ್ತಿ ನೋಡಿದೆ. ಪ್ರವೇಶ ದ್ವಾರದಲ್ಲಿ ಕಬ್ಬಿಣದ ಅಕ್ಷರಗಳಲ್ಲಿ **'Arbeit Macht Frei'** (ಕೆಲಸದಿಂದ ಸ್ವಾತಂತ್ರ್ಯ ಸಿಗುತ್ತದೆ) ಎಂದು 'ಕಾಯಕವೇ ಕೈಲಾಸ' ಎಂಬಂತೆ ಬರೆಯಲಾಗಿದೆ. ದುರಂತವೆಂದರೆ, ಇದರೊಳಗೆ ಪ್ರವೇಶಿಸುತ್ತಿದ್ದಂತೆ ಕೈದಿಗಳು ಸ್ವಾತಂತ್ರ್ಯ ಕಳೆದುಕೊಳ್ಳುತ್ತಿದ್ದರು, ಜೀವವನ್ನೂ ಸಹ!

ಒಳ ಪ್ರವೇಶಿಸಿದೆವು. ಕೆಂಪು ಇಟ್ಟಿಗೆಯಲ್ಲಿ ಕಟ್ಟಿರುವ ಯಾವುದೋ ಶಾಲಾ ಕಟ್ಟಡಗಳಂತೆ ಅಥವಾ ಫ್ಯಾಕ್ಟರಿಯಂತೆ ಭಾಸವಾಗುವ ಕಟ್ಟಡಗಳು, ಸುಂದರವಾಗಿರುವ ಹಸಿರು ಹುಲ್ಲು ಹಾಸು, ಎತ್ತರೆತ್ತರಕ್ಕೆ ಬೆಳೆದ ಮರಗಳು